ಎಂದು ನನಗೆ ಚೆನ್ನಾಗಿ ಗೊತ್ತಿತ್ತು.'

ಪ್ವರೊ ತನ್ನ ಕೈಯನ್ನು ಜೇಬಿನೊಳಗಿರಿಸಿ, ಕೆಲವು ಬಿಳಿ ಉಂಡೆಗಳನ್ನು ಹೊರತೆಗೆದ. 'ಈ ರೀತಿ ಇವುಗಳನ್ನು ಜೇಬಿನಲ್ಲಿಟ್ಟುಕೊಳ್ಳುವುದು ತುಂಬಾ ಅಪಾಯಕಾರಿ' ಎಂದು ಅವನು ಪಿಸುಗುಟ್ಟಿದ.

ಯಾವುದೇ ತರಾತುರಿಯಿಲ್ಲದೆ ಅಗಲ ಬಾಯಿಯ ಸೀಸೆಯನ್ನು ತನ್ನ ಇನ್ನೊಂದು ಜೇಬಿನಿಂದ ತೆಗೆದ. ಅದರೊಳಗೆ ಬಿಳಿ ಹರಳುಗಳನ್ನು ಹಾಕಿ, ಮೇಜಿನ ಬಳಿ ಹೋಗಿ, ಆ ಸೀಸೆಯೊಳಗೆ ನೀರನ್ನು ತುಂಬಿಸಿದ. ಅದಕ್ಕೆ ಮುಚ್ಚಳವನ್ನು ಜಾಗರೂಕತೆಯಿಂದ ಭದ್ರವಾಗಿ ಮುಚ್ಚಿ, ಆ ಎಲ್ಲಾ ಹರಳುಗಳು ನೀರಿನಲ್ಲಿ ಕರಗುವವರೆಗೂ ಆ ಸೀಸೆಯನ್ನು ಕುಲುಕಿದ. ಹ್ಯಾರಿಸನ್ ಅದನ್ನೆಲ್ಲಾ ಮೂಕವಿಸ್ಮಿತನಾಗಿ ನೋಡುತ್ತಿದ್ದ.

ಆ ಪೂರ್ಣ ಮಿಶ್ರಿತ ದ್ರಾವಣವನ್ನು ತೆಗೆದುಕೊಂಡು ಪ್ವರೊ ಕಣಜದ ಗೂಡಿನ ಬಳಿ ನಡೆದ. ಸೀಸೆಯ ಬಿರಡೆ ತೆಗೆದು, ತನ್ನ ತಲೆಯನ್ನು ಬೇರೆಡೆಗೆ ತಿರುಗಿಸಿ, ಆ ದ್ರಾವಣವನ್ನು ಕಣಜದ ಗೂಡಿಗೆ ಸುರಿದ. ನಂತರ ಒಂದೆರಡು ಹೆಜ್ಜೆ ಹಿಂದಿಟ್ಟು ಅದನ್ನು ಗಮನಿಸಿದ. ಆಗ ತಾನೆ ಗೂಡಿಗೆ ಮರಳಿ ಬರುತ್ತಿದ್ದ ಕೆಲವು ಕಣಜಗಳು ಸ್ವಲ್ಪ ನರಳಿ, ನಂತರ ನಿಶ್ಚಲವಾದವು. ಇನ್ನುಳಿದ ಕಣಜಗಳು ಗೂಡಿನಿಂದ ಪಾರಾಗುವ ಪ್ರಯತ್ನದಲ್ಲೇ ಸತ್ತು ಬಿದ್ದವು. ಒಂದೆರಡು ನಿಮಿಷ ಪ್ವರೊ ಅಲ್ಲೇ ನಿಂತು ಅದನ್ನು ವೀಕ್ಷಿಸಿದ. ನಂತರ ತಲೆ ಅಲ್ಲಾಡಿಸಿಕೊಂಡು ವರಾಂಡಾಗೆ ಮರಳಿದ.

'ನೋವಿಲ್ಲದ ಸಾವದು' ಪ್ವರೊ ಹೇಳಿದ. 'ಸ್ವಲ್ಪ ಅರಿವಾಗುವುದಕ್ಕೆ ಮುಂಚೆಯೇ ಬರುವ ಸಾವು.'

ಹ್ಯಾರಿಸನ್ ಧೈರ್ಯ ತಂದುಕೊಂಡು ಕೇಳಿದ, 'ನಿನಗೆಷ್ಟು ಗೊತ್ತು?'

ಪ್ವರೊ ನೇರವಾಗಿ ಅವನ ಕಡೆ ನೋಡಿದ. 'ಈಗಾಗಲೇ ನಿನಗೆ ಹೇಳಿದಂತೆ, ಕ್ಲಾಡ್ ಲ್ಯಾಂಗ್ಟನ್‌ನ ಹೆಸರನ್ನು ನಾನು ಪುಸ್ತಕದಲ್ಲಿ ನೋಡಿದೆ. ಆದರೆ, ಅದಾದ ಕೂಡಲೇ ಅವನನ್ನು ಭೇಟಿ ಮಾಡುವ ಅವಕಾಶ ನನಗೆ ಸಿಕ್ಕಿತು ಎಂಬುದನ್ನು ನಾನು ನಿನಗೆ ಹೇಳಲಿಲ್ಲ. ಕಣಜದ ಗೂಡು ನಾಶ ಮಾಡಲು, ನಿನ್ನ ಕೋರಿಕೆಯ ಮೇರೆಗೆ ಅವನು ಪೊಟ್ಯಾಷಿಯಂ ಸಯನೈಡ್ ಕೊಂಡುಕೊಳ್ಳುತ್ತಿದ್ದಾನೆಂದು ನನಗೆ ಹೇಳಿದ. ಅದು ನನಗೆ ವಿಚಿತ್ರವೆನಿಸಿತು. ಏಕೆಂದರೆ ನೀನು ಆಗಲೇ ಪ್ರಸ್ತಾಪಿಸಿದ ಆ ಭೋಜನ ಕೂಟದ ನೆನಪು ನನಗಾಯಿತು. ಅದರಲ್ಲಿ ನೀನು ಪೆಟ್ರೋಲಿನ ಶ್ರೇಷ್ಠ ಗುಣಮಟ್ಟದ ಬಗ್ಗೆ ಮಾತನಾಡಿದ್ದೆ ಮತ್ತು ಸಯನೈಡ್ ಕೊಂಡುಕೊಳ್ಳುವುದು ಅನವಶ್ಯಕ ಹಾಗೂ ಅಪಾಯಕಾರಿ ಎಂದು ದೂರಿದ್ದೆ.'

'ಮುಂದುವರಿಸು' ಹ್ಯಾರಿಸನ್ ಹೇಳಿದ.

'ನನಗೆ ಇನ್ನೊಂದು ವಿಷಯವೂ ಗೊತ್ತಿತ್ತು. ಕ್ಲಾಡ್ ಲ್ಯಾಂಗ್ಟನ್ ಮತ್ತು ಮೊಲಿ ಡೀನ್ ಜೊತೆಗಿರುವುದನ್ನು ಒಮ್ಮೆ ನೋಡಿದ್ದೆ. ಅವರನ್ನು ಬೇರ್ಪಡಿಸಿ ನಿನ್ನ ತೋಳ ತೆಕ್ಕೆಯೊಳಗೆ ಅವಳನ್ನು ತಂದುಬಿಟ್ಟ ಆ ಪ್ರೇಮಿಗಳ ಜಗಳ ಎಂತಹುದೆಂದು ನನಗೆ ಗೊತ್ತಿಲ್ಲ. ಆದರೆ, ಅವರ ನಡುವಿನ ಮನಸ್ತಾಪ ಕರಗಿ, ಈಗ ಮಿಸ್ ಡೀನ್ ತನ್ನ ಪ್ರಿಯತಮನ ಕಡೆ ವಾಲುತ್ತಿದ್ದಾಳೆ ಎಂದು ಅದರಿಂದ ನನಗೆ ಮನವರಿಕೆಯಾಯಿತು.'

'ಮುಂದುವರಿಸು.'

'ಇದಕ್ಕಿಂತ ಹೆಚ್ಚಾಗಿ ಇನ್ನೊಂದು ವಿಷಯ ನನಗೆ ಗೊತ್ತು. ನಿನ್ನೆ ಹಾರ್ಲೆ ಸ್ಟ್ರೀಟ್ ಬೀದಿಯಲ್ಲಿದ್ದೆ. ನೀನು ವೈದ್ಯನೊಬ್ಬನ ಮನೆಯಿಂದ ಹೊರಬಂದದ್ದು ನೋಡಿದೆ. ಆ ವೈದ್ಯ ಯಾರು, ಮತ್ತು ಜನರು ಯಾವ ರೋಗಕ್ಕೆ ಆ ವೈದ್ಯನ ಬಳಿ ಹೋಗುವರೆಂದೂ ನನಗೆ ಗೊತ್ತು. ಹಾಗಾಗಿ ನಿನ್ನ ಮುಖದ ಮೇಲಿದ್ದ ಭಾವನೆಗಳು ನನಗೆ ಸಂಪೂರ್ಣವಾಗಿ ಅರ್ಥವಾದವು. ಅಂತಹ